ಅಷ್ಟು ಸುಲಭವಾಗಿ ಮೇಷ್ಟರ ಮಾತನ್ನು ತಟ್ಟಿ ಹಾರಿಸಬಾರದಾಗಿತ್ತು. ಮನೆಯಲ್ಲಿ ತರಲೆ, ತಂಟೆ ಮಾಡುವ ಮಗ ಸ್ಕೂಲಿನಲ್ಲೂ ಹಾಗೇ ವರ್ತಿಸುತ್ತಾನೆ ಅಂದುಕೊಳ್ಳಬಾರದಿತ್ತು. ಹಣಕಾಸಿನ ಬಿಕ್ಕಟ್ಟು ಅನ್ನುವುದು ಅನಿವಾರ್ಯವಾದದ್ದನ್ನೂ ಅನಿವಾರ್ಯವಲ್ಲ ಎಂದು ನಿವಾರಿಸಿಕೊಳ್ಳಲು ಹಾದಿ ಹುಡುಕುತ್ತಿತ್ತೇ ವಿನಾ ಅನಿವಾರ್ಯವನ್ನು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲವಾ? ಹಳ್ಳಿ ಜನ. ಮುಗ್ಧತೆ. ಧೋರಣೆ. ಡಾಕ್ಟರ ಶಾಪುಗಳೇನಿದ್ದರೂ ಪೇಟೆಯಲ್ಲಿ. ಹೋಗಿ ಬರುವುದಕ್ಕೆಂದೇ ಒಂದಿಡೀ ದಿನ ಹಾಳು. ಮಗನ ಮೇಲೆ ಪ್ರೀತಿ ಇರಲಿಲ್ಲವಾ? ಯಾವ ದೇವರ ಮೇಲೆ ಬೇಕಾದರೂ ಆಣೆ ಹಾಕಿ ಆ ಪ್ರೀತಿಯನ್ನು ದೃಢೀಕರಿಸಬಲ್ಲರು. ಕೆಲವೊಂದು ಸಲ ಹೀಗಾಗಿಬಿಡುತ್ತದೆ. ಕಡ್ಡಿ ಅಂದುಕೊಂಡಿದ್ದು ಗುಡ್ಡವಾಗುತ್ತದೆ. ಮಗನ ಸಮಸ್ಯೆ ತುಂಟಾಟದ ಮೂಲದ್ದಲ್ಲ ಎನ್ನುವುದು ಗೊತ್ತಾದಾಗ ಕಾಲ ಮಿಂಚಿತ್ತು.

‘ತೀರಾ ಕಣ್ಣಿನ ಹತ್ರ ಪುಸ್ತಕ ಹಿಡ್ಕಂಡು ಓದ್ತಾನೆ. ಡಾಕ್ಟ್ರ ಹತ್ರ ಕರ್ಕೊಂಡ್ಹೋಗಿ ತೋರಿಸ್ಗಂಬನ್ನಿ...’ ಎನ್ನುವ ಮಾತು ಹೆಂಡತಿಯ ಬಾಯಿಂದ ಬಂದು, ಜೊತೆಗೆ ಮೇಷ್ಟ್ರು ಹೇಳಿದ್ದ ಮಾತೂ ನೆನಪಾಗಿ, ಎದೆ ಧಡಗುಟ್ಟಿತ್ತು. ‘ಕನ್ನಡಕ ಬರುತ್ತೆ, ತಮ್ಮಣ್ಣಂಗೆ ಕನ್ನಡಕ ಬರುತ್ತೆ...’ ಎಂದು ಅಕ್ಕಂದಿರು ಕೀಟಲೆ ಶುರು ಮಾಡಿಕೊಂಡಿದ್ದರು. ಮಗನನ್ನು ಕರೆದುಕೊಂಡು ಪೇಟೆಯ ಬಸ್ಸು ಹತ್ತಿದ್ದರು ಮೂರ್ತಿಗಳು.

***

ಹಾಗಿದ್ದೆಲ್ಲಾ ಕೇಳಿ ಗೊತ್ತಿತ್ತಾ? ನೋಡಿ ಗೊತ್ತಿತ್ತಾ? ಕಣ್ಣು ಕೆಂಪಾದರೆ ಉಷ್ಣ ಎಂದು ನೆತ್ತಿಗೆ ಹರಳೆಣ್ಣೆ ತಿಕ್ಕುವುದೇ ಮನೆ ಮದ್ದು. ಹೆಚ್ಚೆಂದರೆ ಕೊತ್ತಂಬರಿ ನೆನೆಸಿದ ನೀರು ಕಣ್ಣಿಗೆ.

‘ತಡ ಮಾಡಿದ್ರಿ...’ ಹೆದರಿಸಿದ್ದರು ಡಾಕ್ಟ್ರು. ಹೆದರಿಸಿದ್ದಾ? ಅಲ್ಲಲ್ಲ, ಸತ್ಯಕ್ಕೆ ಕನ್ನಡಿ ಹಿಡಿದಿದ್ದರು. ಮೂರ್ತಿಗಳಿಗೆ ಬ್ಲಡ್ ಪ್ರೆಷರ್ ಕೇಳಿ ಗೊತ್ತಿತ್ತೇ ವಿನಾ ಐ ಪ್ರೆಷರ್ ಎಲ್ಲಿ ಗೊತ್ತಿತ್ತು? ಅವರು ಕೊಟ್ಟ ಔಷಧಿಯನ್ನು ಕ್ರಮ ತಪ್ಪದೆ ಕಣ್ಣಿಗೆ ಹಾಕುತ್ತಿದ್ದರೂ, ಕಾಲಕಾಲಕ್ಕೆ ಡಾಕ್ಟರ ಸಲಹೆ ಸೂಚನೆಗೆ ಓಡಿ ಹೋಗುತ್ತಿದ್ದರೂ, ಮಧುಸೂದನನ ಒಂದು ಕಣ್ಣಿನ ದೃಷ್ಟಿ ಮಸುಕು ಮಸುಕಾಗಿ, ಕೊನೆಗೊಮ್ಮೆ ಬೆಳಕು ಇಂಗಿ, ‘ಹೀಗಾಗುತ್ತೇಂತ ಯಾರಿಗೆ ಗೊತ್ತಿತ್ತೇ ಮಾರಾಯ್ತಿ? ಯಾವ ಪಾಪಕ್ಕೆ ಈ ಶಿಕ್ಷೆ?’ ಎಂದು ಮಗನನ್ನು ತಬ್ಬಿಕೊಂಡು ಗೋಳುಗರೆಯುತ್ತಿದ್ದರು ಮೂರ್ತಿಗಳು. ಮತ್ತು ಹೀಗೆ ತಬ್ಬಿದ ಕೈಯನ್ನು ಕಿತ್ತೆಸೆದು ದೂರ ಹೋಗುತ್ತಿದ್ದ ಮಗ.

ದೂರವಾದವನು ದೂರವಾಗುತ್ತಾ, ದೂರವಾಗುತ್ತಾ... ದುಃಖ ಉಮ್ಮಳಿಸಿ ಬರುತ್ತಿತ್ತು ಮೂರ್ತಿಗಳಿಗೆ. ‘ದೇವರು ಎರಡು ಕಣ್ಣುಗಳನ್ನೂ ಕಿತ್ತುಕೊಳ್ಳಲಿಲ್ಲವಲ್ಲಾ’ ಎನ್ನುವ ಸಮಾಧಾನ ತಮ್ಮ ಬೇಜವಾಬ್ದಾರಿ ನಡವಳಿಕೆಗೆ ಉತ್ತರವಲ್ಲ ಎನಿಸಿದಾಗ, ‘ಜೀವ ಕಳೆದುಕೊಂಡುಬಿಡಲೇ...’ ಎನ್ನುವಷ್ಟು ಉದ್ವಿಗ್ನತೆ. ಅದರಿಂದ ಮಗನ ಭವಿಷ್ಯ ಮತ್ತಷ್ಟು ಕ್ರೂರವಾಗಬಹುದೇ ವಿನಾ ಪ್ರಯೋಜನವೇನಿಲ್ಲ ಎನ್ನುವ ವಾಸ್ತವದ



ಅರಿವು. ಅವರವರ ಕಷ್ಟ ಸುಖ, ನೋವು ನಲಿವು ಅವರವರಿಗೆ. ಕಾಲ ತನ್ನಷ್ಟಕ್ಕೆ ಪುಟ ಮಗುಚುತ್ತಿತ್ತು.

***

‘ಕಣ್ಣಿಗೆ ಪೊರೆ ಬಂದಿದೆಯಂತೆ, ಆಪರೇಷನ್ ಮಾಡಿಸಬೇಕಂತೆ...’ ದೀವಳಿಗೆ ಹಬ್ಬಕ್ಕೆ ಮಗ, ಸೊಸೆ ಮನೆಗೆ ಬಂದಾಗ ಸೊಸೆಯೊಂದಿಗೆ ಹೇಳಿಕೊಂಡಿದ್ದರು ಮೂರ್ತಿಗಳು.

‘ನಮ್ಮ ಜೊತೆ ಹೊರಡಿ ಮತ್ತೆ. ಇಲ್ಲಿನ ವ್ಯವಾರ ನೋಡ್ಕಳ್ಳೋಕೆ ಜನ ಉಂಟಲ್ಲ...’ ರಾಧೆ ಒತ್ತಾಯ ಹಾಕಿದ್ದಳು. ಈ ಮಾತು ಮಗ ಹೇಳಿದ್ದರೆ ಅದರ ವಜನು ಬೇರೆ ಇರುತ್ತಿತ್ತು. ಆದರೆ ಬಾಯಿಗೆ ಕಡುಬು ತುಂಬಿಕೊಂಡವನಂತೆ ಅವನು ತೆಪ್ಪಗುಳಿದಿದ್ದ. ರಾಧೆ ಮಾವನಿಗೆ ಅಗತ್ಯವೆನಿಸಿದ ಬಟ್ಟೆಬರೆಗಳನ್ನು ತಾನೇ ಕೈಚೀಲಕ್ಕೆ ತುಂಬಿ ಅವರನ್ನು ಹೊರಡಿಸಿಕೊಂಡು ಬಂದಿದ್ದಳು. ಆಗ ವಿರೋಧದ ಮಾತಾಡಿರಲಿಲ್ಲ ಮಗ. ಆದರೆ ಇಲ್ಲಿಗೆ ಬಂದು ಐದಾರು ತಿಂಗಳು ಕಳೆಯುತ್ತಾ ಬಂದಿದ್ದರೂ ಡಾಕ್ಟರ ಹತ್ತಿರ ಹೋಗುವ ಪ್ರಸ್ತಾಪ ಅವನ ಬಾಯಿಂದ ಬಂದಿಲ್ಲ. ಪ್ರತೀಕಾರ ತೀರಿಸಿಕೊಳ್ಳುವ ಒಂದು ವಿಧವೇ? ತನ್ನ ಮೇಲೆ ಮಗನಿಗೆ ಅಷ್ಟು ದ್ವೇಷವಿದೆಯೇ? ಅಥವಾ ನಿಜವಾಗಲೂ ಅವನಿಗೆ ಪುರುಸೊತ್ತಾಗಿಲ್ಲವಾ? ಬೆಳಿಗ್ಗೆ ಹೋಗುತ್ತಾನೆ. ಸಂಜೆ ಬರುತ್ತಾನೆ. ಒಂದೇ ಟೇಬಲ್ಲಿನ ಎದುರುಬದುರು ಕುರ್ಚಿಗಳಲ್ಲಿ ತಿಂಡಿಗೆ, ರಾತ್ರಿಯ ಊಟಕ್ಕೆ ಕೂರುತ್ತಿದ್ದರೂ ಆ ಸಮಯದಲ್ಲಿ ಅವನ ಕೈಲಿ ಪೇಪರು, ಅಥವಾ ಮೊಬೈಲು.

‘ಇಲ್ಲಿ ಬಂದು ಸಿಕ್ಕಿ ಹಾಕಿಕೊಂಡೆ. ವಾಪಸು ಹೋಗುತ್ತೇನೆ’ ಅಂದುಕೊಂಡಿದ್ದು ಹಲವು ಸಲ. ‘ತಡೀರಿ ಮಾವ. ಅಲ್ಲಿ ತಲೆ ಹೋಗುವಂತಾ ಕೆಲಸ ಏನಿದೆ?’ ಅನ್ನುತ್ತಾಳೆ ಸೊಸೆ.

‘ನಾನು ಬೇಕೆಂದೇ ನಿನ್ನ ಉದಾಸೀನ ಮಾಡಿದ್ದಲ್ಲ ಕಣೋ. ಕಾಲ ಹಾಗಿತ್ತು. ಪರಿಸ್ಥಿತಿ ಹಾಗಿತ್ತು. ಬುದ್ಧಿಮಟ್ಟ ಅಷ್ಟಿತ್ತು. ಆರ್ಥಿಕಸ್ಥಿತಿ ನೆಲ ಕಚ್ಚಿತ್ತು. ಜೀವಮಾನ ಇಡೀ ನನ್ನ ದ್ವೇಷಿಸುತ್ತಾ ದೂರ ಇಡ್ಬೇಡ. ಕ್ಷಮಿಸು, ಕ್ಷಮಿಸು, ಕ್ಷಮಿಸು...’

ದನಿಯೆತ್ತಿ ಮಗನೊಡನೆ ಕ್ಷಮಾಪಣೆ ಕೇಳಬೇಕೆಂದುಕೊಂಡಿದ್ದು ಕಾರ್ಯರೂಪಕ್ಕೆ ಬರದಂತೆ ಗಂಟಲನ್ನು ಒತ್ತಿ ಹಿಡಿಯುತ್ತಿದ್ದುದು ಯಾವುದು? ತಾನು ತಲೆ ಕುಯ್ದು ಮುಂದಿಟ್ಟರೂ ಅವನು ಒಪ್ಪಿಕೊಳ್ಳುವಂತವನಲ್ಲ ಎನ್ನುವ ಹಿಂಜರಿಕೆ? ಉದ್ದೇಶಪೂರ್ವಕ ತಾನೇನು ಅವಗಣನೆ ಮಾಡಿದ್ದಲ್ಲ ಎನ್ನುವ ಬಿಗುಮಾನ? ಏನೋ ಒಂದು

***

ಅತ್ತ ಮಧುಸೂದನ ಊರಿಗೆ ಹೊರಟ. ಇತ್ತ ರಾಧೆ ಮಾವನನ್ನು ಹೊರಡಿಸಿಕೊಂಡು ಕಣ್ಣಾಸ್ಪತ್ರೆಗೆ ಕರೆದುಕೊಂಡು ಹೋದಳು. ‘ಅವನಿಗೆ ಸಿಟ್ಟು ಬರುತ್ತೇನೋ’ ಕುಂಯ್ಗುಟ್ಟಿದ್ದರು ಮೂರ್ತಿಗಳು.

‘ಬಂದ್ರೆ ಬರುತ್ತೆ. ನಮಗೂ ಕರ್ತವ್ಯ ಅನ್ನೋದಿರಲ್ವಾ? ಅವರ ಎದುರೇ ನಾನು ಯಜಮಾನಿಕೆ ಮಾಡೋದು ಬೇಡ ಅಂದ್ಕೊಂಡೆ. ಅವರು ಬರೋದ್ರೊಳಗೆ...’

ಹೇಳಿದಂತೆ ನಡೆದುಕೊಂಡಳು ರಾಧೆ. ಮಧುಸೂದನ ವಾಪಸು ಬರುವಾಗ ಮೂರ್ತಿಗಳ ಎರಡೂ ಕಣ್ಣುಗಳ ಆಪರೇಷನ್ ಆಗಿ, ಕಾಲಕಾಲಕ್ಕೆ ಅವರ ಕಣ್ಣಿಗೆ ಔಷಧಿ ಹಾಕುತ್ತಾ, ಮುತುವರ್ಜಿಯಿಂದ ಅವರನ್ನು ನೋಡಿಕೊಳ್ಳುತ್ತಿದ್ದಳು ರಾಧೆ.

ನಿರೀಕ್ಷೆಯಂತೆ ಮಧುಸೂದನ ವ್ಯಗ್ರನಾಗಿದ್ದ.

‘ನಾನೊಬ್ಬ ಇದೀನಿ, ಒಂದು ಮಾತು ಕೇಳ್ಬೇಕು ಅನ್ನೋದು ಮರೆತೇಹೋಗಿತ್ತಾ?’ ದನಿ ಏರಿಸಿದ್ದ.

‘ಕೇಳೋಕೇನಿದೆಯಪ್ಪಾ? ಪುರುಸೊತ್ತಿತ್ತು ನಂಗೆ. ಅದಕ್ಕೇ’ ತಣ್ಣಗೆ ಹೇಳಿದ್ದಳು ರಾಧೆ.

‘ಸಾವಿರಾರು ರೂಪಾಯಿ ವ್ಯವಹಾರ. ದುಡ್ಡೆಲ್ಲಿಂದ ತಂದೆ?’

‘ನನ್ನತ್ರ ದುಡ್ಡು ಎಲ್ಲಿಂದ ಬರುತ್ತೇರೀ? ನೀವು ಮನೆ ಖರ್ಚಿಗೆ ಕೊಟ್ಟಿರ್ತಿದ್ರಲ್ಲಿ ವರ್ಷಾನುಗಟ್ಲೆಯಿಂದ ಉಳಿಸ್ಕೊಂಡು ಬಂದಿದ್ದು, ಆಪದ್ಧನ. ಮಾವಾನೂ ಒಂದಿಷ್ಟು ತಗಂಬಂದಿದ್ರು’

ಮತ್ತೆ ಮಾತು ಬೆಳೆಸಲು ಹೋಗಿರಲಿಲ್ಲ ಮಧುಸೂದನ. ರಾಧೆ ಮಾತ್ರವಲ್ಲ, ಮೂರ್ತಿಗಳೂ ಸಮಾಧಾನದ ನಿಟ್ಟುಸಿರೆಳೆದಿದ್ದರು.

***

ರಾಧೆಗೆ ಕೈ ಬಿಡುವಿಲ್ಲದಿದ್ದರೆ ಅಪ್ಪನ ಕಣ್ಣಿಗೆ ಡ್ರಾಪ್ಸ್ ಹಾಕುವ ಕೆಲಸ ಮಾಡುತ್ತಾನೆ ಮಧುಸೂದನ. ರಾಧೆ ಉಪಾಯವಾಗಿ ಅವನಿಗೆ ಆ ಕೆಲಸ ಅಂಟಿಸಿದ್ದಾಳೆ, ಅವನು ಮನೆಯಲ್ಲಿರುವಾಗ. ಅಷ್ಟು ಹತ್ತಿರದಿಂದ ಯಾವತ್ತೂ ತಾನು ಅಪ್ಪನನ್ನು ಗಮನವಿರಿಸಿ ನೋಡಿದ್ದಿಲ್ಲ ಅನಿಸುತ್ತದೆ ಮಧುಸೂದನನಿಗೆ. ಅವ್ಯಕ್ತ ಅನುಭೂತಿಯೊಂದು ಮನದೊಳಗೆ ಕದಲಿದಂತಾಗುತ್ತದೆ. ವೃಥಾ ಅಪ್ಪನನ್ನು ದೂರ ಇಟ್ಟೆನೇ ತಾನು? ನೂರು ತಾಪತ್ರಯಗಳ ನಡುವೆ ಸಿಕ್ಕಿಕೊಂಡಿದ್ದ ಅಪ್ಪ ಮಗನ ಕಡೆ ಗಮನ ಹರಿಸಿರಲಿಕ್ಕಿಲ್ಲವೇ ವಿನಾ ಯಾವ ತಂದೆ ಗೊತ್ತಿದ್ದೂ ಗೊತ್ತಿದ್ದೂ ಮಗನ ವಿಷಯದಲ್ಲಿ ತಪ್ಪೆಸಗುತ್ತಾನೆ? ಆ ಸತ್ಯದ ಸಾಕ್ಷಾತ್ಕಾರವಾಗಲು ಇಷ್ಟೊಂದು ದೀರ್ಘ ವರ್ಷಗಳು ಬೇಕಾದುವೇ? ತನ್ನ ಅಸಹಾಯಕತೆಯೇ ಕಾರಣವಾಗಿ ಅದಕ್ಕೊಂದು ಹೊರಹರಿವು ಕಲ್ಪಿಸಿಕೊಡಲು ಮಾರ್ಗವಾದನೇ ಅಪ್ಪ?

ತನ್ನರಿವಿಗೇ ಬಾರದಂತೆ ನಂಜು ತಿಳಿಯಾಗುತ್ತಿರುವ ಅಸ್ಪಷ್ಟ ಭಾವನೆಯಿಂದ ವಿಚಲಿತನಾಗುತ್ತಾನೆ ಮಧುಸೂದನ. ಮತ್ತು ಮಗನ ಸಾನ್ನಿಧ್ಯ ಸುಖದಿಂದ ಪುಳಕಿತರಾಗುತ್ತಾರೆ ಮೂರ್ತಿಗಳು.

**ಪ್ರತಿಕ್ರಿಯಿಸಿ: feedback@sudha.co.in**